# ಕಷ್ಟಜೀವಿಗಳ, ಪ್ರಾಮಾಣಿಕರ ದೇಶದಲ್ಲಿ ಹೊದ್ದು ಮಲಗಿದ ಬಡತನ

## ಪಶ್ಚಿಮ ಆಫ್ರಿಕಾದ ಘಾನಾ ದೇಶದ ಪ್ರವಾಸ ಅನುಭವ

ಬಸವರಾಜ ಹೊರಟ್ಟಿ
ಸಭಾಪತಿಗಳು,

ನನ್ನ ನಾಲ್ಕು ದಶಕಗಳ ಸಾರ್ವಜನಿಕ ಜೀವನದಲ್ಲಿ 22ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಭೇಟಿ ನೀಡಿದ್ದೇನೆ. ಅಲ್ಲಿನ ಪರಿಸರ ಸೌಂದರ್ಯ ಅಭಿವೃದ್ಧಿ, ಕಾನೂನು ಸುವ್ಯವಸ್ಥೆ ಹೀಗೆ ದೈನಂದಿನ ಬದುಕಿಗೆ ಸ್ಪಂದಿಸುವ ಹತ್ತಾರು ಅಂಶಗಳನ್ನು ಮನಗಂಡಿದ್ದೇನೆ. ಈ ಎಲ್ಲ ದೇಶಗಳು ಬೇರೆ ಬೇರೆ ದೃಷ್ಟಿಯಿಂದ ಪ್ರವಾಸದ ಅನುಭವವನ್ನು ನೀಡಿದರೆ ಪಶ್ಚಿಮ ಆಫ್ರಿಕಾದ 'ಘಾನಾ' ದೇಶದ ಪ್ರವಾಸ ನನ್ನ ಮನವನ್ನು ಅಪಾರ ಕಲಕಿತು.

ಅಕ್ಟೋಬರ್ 3 ರಿಂದ 6ರವರೆಗೆ ಪಶ್ಚಿಮ ಆಫ್ರಿಕಾದ ಗಿನಿಯಾ ಕೊಲ್ಲಿಯ ಕರಾವಳಿ ಪ್ರದೇಶದಲ್ಲಿನ ಘಾನಾ ರಾಜಧಾನಿ 'ಅಕ್ರಾ'ದಲ್ಲಿ ನಡೆದ 66ನೇ ಕಾಮನವೆಲ್ತ್ ಪಾರ್ಲಿಮೆಂಟ್ ಸಮ್ಮೇಳನದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿದ್ದೆ. ಈ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ 100ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದು ವಿಶೇಷ.

ಈ ಸಮ್ಮೇಳನದಲ್ಲಿ ನಾನು 'ಇಂಧನ ಕೊರತೆ ನೀಗಿಸುವಲ್ಲಿ ಪರಿಸರದ ಪಾತ್ರ' ಕುರಿತು ವಿಷಯ ಮಂಡಿಸಿದೆ. ಈ ಅಮೂಲ್ಯ ಸಂಗತಿಯ ಕುರಿತು ಸಮ್ಮೇಳನದಲ್ಲಿ ಸಾಕಷ್ಟು ಚರ್ಚೆಯಾಯಿತು.

ಸಮ್ಮೇಳನ ಹೊರತಾಗಿ ಆ ದೇಶದಲ್ಲಿ ಹೊಸ ಜಗತ್ತನ್ನು ನಾನು ಕಂಡೆ. ಆ ಬಗೆಗಿನ ಅನುಭವ, ಮನಕಲಕಿದ ವಾಸ್ತವಿಕ ಅಂಶಗಳ ಸನ್ನಿವೇಶಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲೇಬೇಕು ಎನಿಸುತ್ತದೆ.




'ಘಾನಾ' ದೇಶದ 'ಅಕ್ರಾ'ದಲ್ಲಿ ನಡೆದ 66ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಸಮ್ಮೇಳನ-2023ರಲ್ಲಿ ಪಾಲ್ಗೊಂಡ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ವಿಧಾನ ಸಭಾಧ್ಯಕ್ಷ ಯು.ಟಿ ಖಾದರ್ ಅವರಿಗೆ ಭವ್ಯ ಸ್ವಾಗತ ಕೋರಿದ ನೋಟ.

ನಾನು ಮತ್ತು ಇತರ ಅಧ್ಯಕ್ಷರು ಸೇರಿ 'ಅಕ್ರಾ' ನಗರದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿಯ ಜನರ ಆರೋಗ್ಯ, ಶಿಕ್ಷಣ ಪದ್ಧತಿ, ನೈರ್ಮಲ್ಯದ ಬಗ್ಗೆ ಆ ಜನಗಳಿಗಿರುವ ಕಾಳಜಿ ಎಲ್ಲವನ್ನೂ ಅಧ್ಯಯನ ಮಾಡಿದೆವು. ಅಲ್ಲಿನ ಮಕ್ಕಳೊಂದಿಗೆ ಸ್ವಲ್ಪ ಹೊತ್ತು ಕಳೆದದ್ದು ಅತೀವ ಆನಂದವನ್ನು ನೀಡಿತು. ಅಲ್ಲಿನ ನೈಸರ್ಗಿಕ ಸಂಪತ್ತು, ಗಾಳಿ, ಪರಿಸರ ಇತ್ಯಾದಿಗಳ ಬಗ್ಗೆಯೂ ಹಲವಷ್ಟು ವಿಷಯಗಳನ್ನು ತಿಳಿದುಕೊಂಡೆವು.

ಬಿಡುವಿನ ವೇಳೆಯಲ್ಲಿ ಅಕ್ರಾ ನಗರ ಹಾಗೂ ಸುತ್ತಲಿನ ಪ್ರದೇಶಗಳಿಗೆ ಭೇಟಿ ನೀಡಿದಾಗ ಬಡ ರಾಷ್ಟ್ರಗಳ ಹೊಸ ಜಗತ್ತಿನ ದರ್ಶನವಾಯಿತು. ಅಲ್ಲಿನ ಜನ ಜೀವನದ ಬದುಕಿನ ಕೆಲ ಸನ್ನಿವೇಶಗಳು ನನ್ನ ಹೃದಯಕ್ಕೆ ನಾಟಿವೆ. ಕೇವಲ 2 ಕೋಟಿ 30 ಲಕ್ಷದಷ್ಟು ಜನಸಂಖ್ಯೆ ಹೊಂದಿರುವ ಪುಟಾಣಿ ದೇಶದ ಜನ ಬದುಕಿನ ಬಂಡಿ ಸಾಗಿಸಲು ಪಡುವ ಕಷ್ಟ, ಕಾಯಕ ನಿಷ್ಠೆ, ಸಾಕ್ಷರತೆಯ ಕೊರತೆ ಎದ್ದು ಕಂಡಿತು. ಮೂಲಸೌಕರ್ಯಗಳಿಲ್ಲದೇ ಜನ ಬದುಕುತ್ತಿರುವುದನ್ನು ಕಂಡಾಗ ಬೇಸರ ಮತ್ತು ಅಷ್ಟೇ ನೋವಾಯಿತು. ಮೂಲಸೌಕರ್ಯ ಪಡೆಯುವಲ್ಲಿ ಈ ದೇಶ ಇನ್ನೂ 100 ವರ್ಷ ಹಿಂದೆ ಉಳಿದಿದೆ ಎಂದೆನಿಸಿತು. ಬಹುದಿನಗಳ ಕಾಲ ನೆನಪಿಡುವಂತಹ ಈ ಪ್ರವಾಸ ನೋವು, ನಲಿವು, ಸಂತಸ, ನೆಮ್ಮದಿ ಹೀಗೆ ಹತ್ತಾರು ವಿಷಯಗಳ ಅರಿವನ್ನು ಮೂಡಿಸಿದ ಘಾನಾ ದೇಶದ ಜನರಿಗೆ ನನ್ನ ನಮಸ್ಕಾರಗಳು.

### ಶೇ. 15 ರಷ್ಟು ಮಾತ್ರ ಶ್ರೀಮಂತರು!

ಘಾನಾದಲ್ಲಿ ಶೇ. 15ರಷ್ಟು ಶ್ರೀಮಂತರಿದ್ದರೆ ಶೇ. 10 ರಷ್ಟು ಮಧ್ಯಮ ವರ್ಗದವರಿದ್ದಾರೆ. ಇನ್ನುಳಿದವರೆಲ್ಲ ಬಡವರೇ! ಅಂತೆಯೇ ಈ ಬಡ ರಾಷ್ಟ್ರದ ಅಭಿವೃದ್ಧಿಗೆ ಕೈ ಜೋಡಿಸಿ ಎಂಬ ಅಧ್ಯಕ್ಷ ಅಕ್ರೋ ಡಾಕೋವಾ ಅಕಫೋ ಅವರ ಮನವಿ ಆ ದೇಶದ ಚಿತ್ರಣ ತೆರೆದಿಟ್ಟಂತಿತ್ತು.

### ಬಡತನದ ಹಿಂದೆ ಭಯಾನಕ ವ್ಯವಸ್ಥೆ

ಅಲ್ಲಿನ 75% ಹೆಣ್ಣು ಮಕ್ಕಳು ದಿನ ನಿತ್ಯ ಜೀವನಕ್ಕೆ ಸಣ್ಣ ಸಣ್ಣ ವ್ಯಾಪಾರ ಮಾಡುತ್ತಾರೆ. ಬಹಳ ಕಷ್ಟ ಜೀವಿಗಳು. ಮತ್ತು ಅಷ್ಟೇ ಪ್ರಾಮಾಣಿಕರು ನಾವು ತಿಳಿದುಕೊಂಡಂತೆ ಅವರ ನಂಬಿಗೆ ವಿಶ್ವಾಸಕ್ಕೆ ಪಾತ್ರರಾಗಿರುವುದು ಬಡತನದ ಹಿಂದೆ ಭಯಾನಕವಾದ ಅವ್ಯವಸ್ಥೆ ಇದೆ. ಆರೋಗ್ಯ, ಶಿಕ್ಷಣ ಸೌಕರ್ಯ ಕೊರತೆ ಇದ್ದು, ಜನರ ಬವಣೆ ಕಂಡಾಗ ಮರುಕವೆನಿಸಿತು.

### ಅಚ್ಚುಕಟ್ಟಾದ ಸಮ್ಮೇಳನ, ಭೇಷ್...

ಸಮ್ಮೇಳನದ ಸವಿನೆನಪುಗಳನ್ನು ಮೆಲುಕು ಹಾಕುವುದಾದರೆ ಅತ್ಯಂತ ಪುಟ್ಟದೇಶವಾದರೂ ಸಮ್ಮೇಳನವನ್ನು ಅಚ್ಚುಕಟ್ಟಾಗಿ ಸಂಘಟಿಸಿತ್ತು. ಅಲ್ಲಿ ಯಾವುದಕ್ಕೂ ಕೊರತೆ ಎಂಬುದು ಇರಲಿಲ್ಲ. ಒಂದು ಸಮ್ಮೇಳನವನ್ನು ಅದರಲ್ಲೂ ಅಂತಾರಾಷ್ಟ್ರೀಯ ಸಭಾಧ್ಯಕ್ಷರ ಸಮ್ಮೇಳನವನ್ನು ಹೇಗೆ ನಡೆಸಬೇಕು ಎಂಬುದು ಇತರೆ ದೇಶಗಳಿಗೆ ಮಾದರಿಯಾಗುವಂತೆ ಈ ಸಮ್ಮೇಳನದ ಸಂಘಟನೆಯಾದದ್ದು ನಮಗೆಲ್ಲ ಅತ್ಯಂತ ಸಂತೋಷವೆನಿಸಿತು.

# ಘಾಣಾ ದೇಶದ ಜನರ ಶ್ರಮ ಭರವಸೆ ಕಳೆದುಕೊಂಡವರಿಗೆ ಮಾದರಿ : ಹೊರಟ್ಟಿ



**ಗದಗ:** ಪಶ್ಚಿಮ ಹಾಗೂ ಯುರೋಪ ದೇಶಗಳಲ್ಲಿಯೇ ಪೂರ್ವ ಪಶ್ಚಿಮದ ಘಾಣಾ ರಾಜ್ಯದ ಜನರು ಅತ್ಯಂತ ಶ್ರಮಜೀವಿಗಳು ಬದುಕುವ ಹಾದಿಯನ್ನು ಕಂಡುಕೊಳ್ಳಲು ನಿತ್ಯ ಅವರು ದುಡಿಯಲೇ ಬೇಕು. ಹೀಗಾಗಿ ಭರವಸೆ ಕಳೆದುಕೊಂಡವರಿಗೆ ಘಾಣಾ ರಾಜ್ಯದ ಜನ ಮಾದರಿಯಾಗಬಲ್ಲರು ಎಂದು ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಅವರು ಬಸವರಾಜ ಹೊರಟ್ಟಿ ದಂಪತಿಗಳು ದತ್ತುಪಡೆದ ಸರಕಾರಿ ಪ್ರೌಢಶಾಲೆ ಸಿದ್ಧಲಿಂಗ ನಗರದಲ್ಲಿ ಆಯೋಜಿಸಿದ್ದ ಬನ್ನಿಮುಡಿಯುವ ಕಾರ್ಯಕ್ರಮ, ವಿವಿಧ ಕಟ್ಟಡಗಳ ಕಾಮಗಾರಿಗಳ ವೀಕ್ಷಣೆ, ಅಭಿನಂದನಾ ಕಾರ್ಯಕ್ರಮ ಹಾಗೂ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಕುರಿತು ವಿದ್ಯಾರ್ಥಿಗಳೊಂದಿಗೆ ಏರ್ಪಡಿಸಿದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಇತ್ತೀಚೆಗೆ ಪಶ್ಚಿಮ ಹಾಗೂ ಯುರೋಪ್ ದೇಶಗಳ ಪ್ರವಾಸವನ್ನು ಯಶಸ್ವಿಯಾಗಿ ಮುಗಿಸಿ ತಾಯ್ನಾಡಿಗೆ ಆಗಮಿಸಿದ ಬಸವರಾಜ ಹೊರಟ್ಟಿಯವರನ್ನು ಸರಕಾರಿ ಪ್ರೌಢಶಾಲೆ ಸಿಬ್ಬಂದಿ, ಹಿತೈಷಿಗಳು ನೀಡಿದ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಅವರು ಅ.1 ರಿಂದ 20ರ ವರೆಗೆ ನಡೆದ ಅಂತರಾಷ್ಟ್ರೀಯ ಸಮ್ಮೇಳನ ಆಯೋಜಿಸಿದ್ದ ಪಶ್ಚಿಮ ಆಫ್ರಿಕಾದ ಘಾಣಾದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿ ಇಂಧನ ಸಮಸ್ಯೆ ನಿವಾರಿಸಲು ಪರಿಸರಗಳ ಪಾತ್ರ ಕುರಿತು ವಿಷಯ ಮಂಡಿಸಿ ಸಮ್ಮೇಳನದಲ್ಲಿ ಭಾಗವಹಿಸಿದ ಇತರೆ ದೇಶಗಳ ಪ್ರತಿನಿಧಿಗಳಿಂದ ಮೆಚ್ಚುಗೆಗೆ ಪಾತ್ರವಾದ ವಿಷಯವನ್ನು ಹಂಚಿಕೊಂಡು ಅವರು ಮಾತನಾಡಿದರು.

ಘಾಣಾ ದೇಶ ಶೇ.80 ಕ್ಕೂ ಹೆಚ್ಚು ಜನ ದುಡಿಮೆಯನ್ನೇ ಅವಲಂಬಿಸಿದೆ. ದುಡಿಯದೇ ಇದ್ದರೆ ಅವತ್ತಿನ ಬದುಕು ದುಸ್ಥರ. ಆದರೂ ಅವರು ಅಲ್ಲಿನ ನಿಸರ್ಗ ಪರಿಸರವನ್ನು ಅವಲಂಬಿಸಿಕೊಂಡು ನೆಮ್ಮದಿಯಿಂದ ಬಾಳುತ್ತಿದ್ದಾರೆ. ಬಸವಣ್ಣನವರ ಕಾಯಕವೇ ಕೈಲಾಸ ಎಂಬ ಮಂತ್ರದಂತೆ ಅತ್ಯಂತ ಖುಷಿಯಾಗಿ ಇರುವ ಜನರನ್ನು ನೋಡಿ ಒಂದು ಬಾರಿ ಆಶ್ಚರ್ಯವಾದರೂ ಬದುಕಲು ಎಷ್ಟೊಂದು ದಾರಿಗಳಿವೆ ಎಂಬ ಸಂಗತಿಗಳು ಆ ಜನರನ್ನು ನೋಡಿದಾಗ ಭರವಸೆಯನ್ನು ಕಳೆದುಕೊಂಡ ಜನತೆಗೆ ಈ ಜನ ಮಾದರಿಯಾಗಬಲ್ಲರು. ಇದರ ಜೊತೆಗೆ ಇಟಲಿ, ಫ್ರಾನ್ಸ, ರೋಮ್ ಇಂಗ್ಲಂಡ್, ಪ್ಯಾರೀಸ್ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಶಿಕ್ಷಣ, ಪರಿಸರ, ಆರೋಗ್ಯ, ಕಾನೂನು ವ್ಯವಸ್ಥೆಗಳ ಕುರಿತು ಮಾಹಿತಿ ಪಡೆದಿದ್ದನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

ಈ ಸಂದರ್ಭದಲ್ಲಿ ಡಾ.ಬಸವರಾಜ ಧಾರವಾಡ, ಸಾ.ಶಿ. ಇಲಾಖೆ ಉಪನಿರ್ದೇಶಕ ಎಂ.ಎ. ರಡ್ಡೇರ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಎಸ್. ಬುರಡಿ, ನಡುವಿನಮನಿ, ನಗರಸಭಾ ಸದಸ್ಯೆ ವಿದ್ಯಾವತಿ ಗಡಗಿ, ಎಸ್.ಎಂ. ಅಗಡಿ, ಮುಖ್ಯೋಪಾಧ್ಯಾಯರಾದ ಪಾರ್ವತಿ ವಸ್ತ್ರದ, ಜಯಲಕ್ಷ್ಮೀ ಬಿ. ಅಣ್ಣಿಗೇರಿ, ಎಸ್.ಆರ್. ಹನಮಗೌಡ್ರ, ಎಸ್.ಜಿ. ಕುಲಗುಡಿ, ಎಮ್. ಆಯ್. ಶಿವನಗೌಡ್ರ, ಎಂ.ಪಿ. ಸಾಂಬ್ರಾಣಿ, ಎಸ್.ಬಿ. ಗುಳೇದವರ, ಎಸ್.ಎಂ. ಪತ್ತಾರ, ಎಸ್.ಎಸ್. ಗಾಳಿ, ಆರ್.ವಾಯ್. ಬಸರಿ, ಎಸ್.ಎ. ಬಾಣದ, ಎಸ್.ಎ. ಗದ್ದನಕೇರಿ, ಎನ್. ಆರ್. ಶಿರೋಳ, ಎಸ್.ಯು. ಕುಷ್ಟಗಿ, ಜಿ.ಎನ್. ಅಳವಂಡಿ, ಪಿ.ವ್ಹಿ. ದಾಸರ, ಪ್ರ.ದ.ಸ. ಎಲ್.ಎಸ್. ಮಾಳೊತ್ತರ ಡಿ.ದರ್ಜೆ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಭರವಸೆ ಕಳೆದುಕೊಂಡವರಿಗೆ ಘಾಣಾ ರಾಜ್ಯದ ಜನ ಮಾದರಿ



■ ವಿಜಯಸಾಕ್ಷಿ ಸುದ್ದಿ, ಗದಗ

ಪಶ್ಚಿಮ ಹಾಗೂ ಯುರೋಪ್ ದೇಶಗಳಲ್ಲಿಯೇ ಪೂರ್ವ ಪಶ್ಚಿಮದ ಘಾಣಾ ರಾಜ್ಯದ ಜನರು ಅತ್ಯಂತ ಶ್ರಮಜೀವಿಗಳು. ಬದುಕುವ ಹಾದಿಯನ್ನು ಕಂಡುಕೊಳ್ಳಲು ನಿತ್ಯ ಅವರು ದುಡಿಯಲೇಬೇಕು. ಹೀಗಾಗಿ ಭರವಸೆ ಕಳೆದುಕೊಂಡವರಿಗೆ ಘಾಣಾ ರಾಜ್ಯದ ಜನ ಮಾದರಿಯಾಗಬಲ್ಲರು ಎಂದು ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಅವರು ಬಸವರಾಜ ಹೊರಟ್ಟಿ ದಂಪತಿಗಳು ದತ್ತು ಪಡೆದ ಸರಕಾರಿ ಪ್ರೌಢಶಾಲೆ ಸಿದ್ಧಲಿಂಗ ನಗರದಲ್ಲಿ ಆಯೋಜಿಸಿದ್ದ ಬನ್ನಿ ಮುಡಿಯುವ ಕಾರ್ಯಕ್ರಮ, ವಿವಿಧ ಕಟ್ಟಡಗಳ ಕಾಮಗಾರಿಗಳ ವೀಕ್ಷಣೆ, ಅಭಿನಂದನಾ ಕಾರ್ಯಕ್ರಮ ಹಾಗೂ ಸಂವಾದ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಘಾಣಾ ದೇಶದ ಶೇ.80ಕ್ಕೂ ಹೆಚ್ಚು ಜನ ದುಡಿಮೆಯನ್ನೇ ಅವಲಂಬಿಸಿದ್ದಾರೆ. ದುಡಿಯದೇ ಇದ್ದರೆ ಅವತ್ತಿನ ಬದುಕು ದುಸ್ತರ. ಆದರೂ ಅವರು ಅಲ್ಲಿನ ನಿಸರ್ಗ, ಪರಿಸರವನ್ನು ಅವಲಂಬಿಸಿಕೊಂಡು ನೆಮ್ಮದಿಯಿಂದ ಬಾಳುತ್ತಿದ್ದಾರೆ. ಬಸವಣ್ಣನವರ ಕಾಯಕವೇ ಕೈಲಾಸ ಎಂಬ ಮಂತ್ರದಂತೆ ಅತ್ಯಂತ ಖುಷಿಯಾಗಿ ಇರುವ ಜನರನ್ನು ನೋಡಿ, ಬದುಕಲು ಎಷ್ಟೊಂದು ದಾರಿಗಳಿವೆ ಎನಿಸದಿರದದು ಎಂದರು.

ಈ ಸಂದರ್ಭದಲ್ಲಿ ಡಾ.ಬಸವರಾಜ ಧಾರವಾಡ, ಸಾ.ಶಿ. ಇಲಾಖೆಯ ಉಪನಿರ್ದೇಶಕ ಎಂ.ಎ ರಡ್ಡೇರ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ, ನಡುವಿನಮನಿ, ನಗರಸಭಾ ಸದಸ್ಯರಾದ ವಿದ್ಯಾವತಿ ಗಡಗಿ, ಎಸ್.ಎಂ ಅಗಡಿ, ಮುಖ್ಯೋಪಾಧ್ಯಾಯರಾದ ಪಾರ್ವತಿ ವಸ್ತ್ರದ, ಜಯಲಕ್ಷ್ಮೀ ಬಿ.ಅಣ್ಣಿಗೇರಿ, ಎಸ್.ಆರ್ ಹನಮಗೌಡ್ರ, ಎಸ್.ಜಿ ಕುಲಗುಡಿ, ಎಮ್.ಆಯ್ ಶಿವನಗೌಡ್ರ, ಎಂ.ಪಿ ಸಾಂಬ್ರಾಣಿ, ಎಸ್.ಬಿ ಗುಳೇದವರ, ಎಸ್.ಎಂ ಪತ್ತಾರ, ಎಸ್.ಎಸ್ ಗಾಳಿ, ಆರ್.ವಾಯ್ ಬಸರಿ, ಎಸ್.ಎ ಬಾಣದ, ಎಸ್.ಎ ಗದ್ದನಕೇರಿ, ಎನ್.ಆರ್ ಶಿರೋಳ, ಎಸ್.ಯು ಕುಷ್ಟಗಿ, ಜಿ.ಎನ್ ಅಳವಂಡಿ, ಪಿ.ವ್ಹಿ ದಾಸರ, ಪ್ರ.ದ.ಸ. ಎಲ್.ಎಸ್ ಮಾಳೊತ್ತರ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಘಾಣಾ ದೇಶದ ಜನರ ಶ್ರಮ ಭರವಸೆ ಕಳೆದುಕೊಂಡವರಿಗೆ ಮಾದರಿ : ಹೊರಟ್ಟಿ

**ಗದಗ:** ಪಶ್ಚಿಮ ಹಾಗೂ ಯುರೋಪ ದೇಶಗಳಲ್ಲಿಯೇ ಪೂರ್ವ ಪಶ್ಚಿಮದ ಘಾಣಾ ರಾಜ್ಯದ ಜನರು ಅತ್ಯಂತ ಶ್ರಮಜೀವಿಗಳು ಬದುಕುವ ಹಾದಿಯನ್ನು ಕಂಡುಕೊಳ್ಳಲು ನಿತ್ಯ ಅವರು ದುಡಿಯಲೇ ಬೇಕು. ಹೀಗಾಗಿ ಭರವಸೆ ಕಳೆದುಕೊಂಡವರಿಗೆ ಘಾಣಾ ರಾಜ್ಯದ ಜನ ಮಾದರಿಯಾಗಬಲ್ಲರು ಎಂದು ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಅವರು ಬಸವರಾಜ ಹೊರಟ್ಟಿ ದಂಪತಿಗಳು ದತ್ತುಪಡೆದ ಸರಕಾರಿ ಪ್ರೌಢಶಾಲೆ ಸಿದ್ಧಲಿಂಗ ನಗರದಲ್ಲಿ ಆಯೋಜಿಸಿದ್ದ ಬನ್ನಿಮುಡಿಯುವ ಕಾರ್ಯಕ್ರಮ, ವಿವಿಧ ಕಟ್ಟಡಗಳ ಕಾಮಗಾರಿಗಳ ವೀಕ್ಷಣೆ, ಅಭಿನಂದನಾ ಕಾರ್ಯಕ್ರಮ ಹಾಗೂ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಕುರಿತು ವಿದ್ಯಾರ್ಥಿಗಳೊಂದಿಗೆ ಏರ್ಪಡಿಸಿದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಇತ್ತೀಚೆಗೆ ಪಶ್ಚಿಮ ಹಾಗೂ ಯುರೋಪ್ ದೇಶಗಳ ಪ್ರವಾಸವನ್ನು ಯಶಸ್ವಿಯಾಗಿ ಮುಗಿಸಿ ತಾಯ್ನಾಡಿಗೆ ಆಗಮಿಸಿದ ಬಸವರಾಜ ಹೊರಟ್ಟಿಯವರನ್ನು ಸರಕಾರಿ ಪ್ರೌಢಶಾಲೆ ಸಿಬ್ಬಂದಿ, ಹಿತೈಷಿಗಳು ನೀಡಿದ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಅವರು ಅ.1 ರಿಂದ 20ರ ವರೆಗೆ ನಡೆದ ಅಂತರಾಷ್ಟ್ರೀಯ ಸಮ್ಮೇಳನ ಆಯೋಜಿಸಿದ್ದ ಪಶ್ಚಿಮ ಆಫ್ರಿಕಾದ ಘಾಣಾದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿ ಇಂಧನ ಸಮಸ್ಯೆ ನಿವಾರಿಸಲು ಪರಿಸರಗಳ ಪಾತ್ರ ಕುರಿತು ವಿಷಯ ಮಂಡಿಸಿ ಸಮ್ಮೇಳನದಲ್ಲಿ ಭಾಗವಹಿಸಿದ ಇತರೆ ದೇಶಗಳ ಪ್ರತಿನಿಧಿಗಳಿಂದ ಮೆಚ್ಚುಗೆಗೆ ಪಾತ್ರವಾದ ವಿಷಯವನ್ನು ಹಂಚಿಕೊಂಡು ಅವರು ಮಾತನಾಡಿದರು.



ಘಾಣಾ ದೇಶ ಶೇ.80 ಕ್ಕೂ ಹೆಚ್ಚು ಜನ ದುಡಿಮೆಯನ್ನೇ ಅವಲಂಬಿಸಿದೆ. ದುಡಿಯದೇ ಇದ್ದರೆ ಅವತ್ತಿನ ಬದುಕು ದುಸ್ತರ. ಆದರೂ ಅವರು ಅಲ್ಲಿನ ನಿಸರ್ಗ ಪರಿಸರವನ್ನು ಅವಲಂಬಿಸಿಕೊಂಡು ನೆಮ್ಮದಿಯಿಂದ ಬಾಳುತ್ತಿದ್ದಾರೆ. ಬಸವಣ್ಣನವರ ಕಾಯಕವೇ ಕೈಲಾಸ ಎಂಬ ಮಂತ್ರದಂತೆ ಅತ್ಯಂತ ಖುಷಿಯಾಗಿ ಇರುವ ಜನರನ್ನು ನೋಡಿ ಒಂದು ಬಾರಿ ಆಶ್ಚರ್ಯವಾದರೂ ಬದುಕಲು ಎಷ್ಟೊಂದು ದಾರಿಗಳಿವೆ ಎಂಬ ಸಂಗತಿಗಳು ಆ ಜನರನ್ನು ನೋಡಿದಾಗ ಭರವಸೆಯನ್ನು ಕಳೆದುಕೊಂಡ ಜನತೆಗೆ ಈ ಜನ ಮಾದರಿಯಾಗಬಲ್ಲರು. ಇದರ ಜೊತೆಗೆ ಇಟಲಿ, ಫ್ರಾನ್ಸ, ರೋಮ್ ಇಂಗ್ಲಂಡ್, ಪ್ಯಾರೀಸ್ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಶಿಕ್ಷಣ, ಪರಿಸರ, ಆರೋಗ್ಯ, ಕಾನೂನು ವ್ಯವಸ್ಥೆಗಳ ಕುರಿತು ಮಾಹಿತಿ ಪಡೆದಿದ್ದನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

ಈ ಸಂದರ್ಭದಲ್ಲಿ ಡಾ.ಬಸವರಾಜ ಧಾರವಾಡ, ಸಾ.ಶಿ. ಇಲಾಖೆ ಉಪನಿರ್ದೇಶಕ ಎಂ.ಎ. ರಡ್ಡೇರ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಎಸ್. ಬುರಡಿ, ನಡುವಿನಮನಿ, ನಗರಸಭಾ ಸದಸ್ಯೆ ವಿದ್ಯಾವತಿ ಗಡಗಿ, ಎಸ್.ಎಂ. ಅಗಡಿ, ಮುಖ್ಯೋಪಾಧ್ಯಾಯರಾದ ಪಾರ್ವತಿ ವಸ್ತ್ರದ, ಜಯಲಕ್ಷ್ಮೀ ಬಿ. ಅಣ್ಣಿಗೇರಿ, ಎಸ್.ಆರ್. ಹನಮಗೌಡ್ರ, ಎಸ್.ಜಿ. ಕುಲಗುಡಿ, ಎಮ್. ಆಯ್. ಶಿವನಗೌಡ್ರ, ಎಂ.ಪಿ. ಸಾಂಬ್ರಾಣಿ, ಎಸ್.ಬಿ. ಗುಳೇದವರ, ಎಸ್.ಎಂ. ಪತ್ತಾರ, ಎಸ್.ಎಸ್. ಗಾಳಿ, ಆರ್.ವಾಯ್. ಬಸರಿ, ಎಸ್.ಎ. ಬಾಣದ, ಎಸ್.ಎ. ಗದ್ದನಕೇರಿ, ಎನ್. ಆರ್. ಶಿರೋಳ, ಎಸ್.ಯು. ಕುಷ್ಟಗಿ, ಜಿ.ಎನ್. ಅಳವಂಡಿ, ಪಿ.ವ್ಹಿ. ದಾಸರ, ಪ್ರ.ದ.ಸ. ಎಲ್.ಎಸ್. ಮಾಳೊತ್ತರ ಡಿ.ದರ್ಜೆ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ
ಸೋಮವಾರ 30 ಅಕ್ಟೋಬರ್ 2023
ಹುಬ್ಬಳ್ಳಿ | HUBBALLI


# ಕಷ್ಟಜೀವಿಗಳ, ಪ್ರಾಮಾಣಿಕರ ದೇಶದಲ್ಲಿ ಹೊದ್ದು ಮಲಗಿದ ಬಡತನ

## ಪಶ್ಚಿಮ ಆಫ್ರಿಕಾದ ಘಾನಾ ದೇಶದ ಪ್ರವಾಸ ಅನುಭವ

**ಬಸವರಾಜ ಹೊರಟ್ಟಿ**
**ಸಭಾಪತಿಗಳು,**

ನನ್ನ ನಾಲ್ಕು ದಶಕಗಳ ಸಾರ್ವಜನಿಕ ಜೀವನದಲ್ಲಿ 22ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಭೇಟಿ ನೀಡಿದ್ದೇನೆ. ಅಲ್ಲಿನ ಪರಿಸರ ಸೌಂದರ್ಯ ಅಭಿವೃದ್ಧಿ, ಕಾನೂನು ಸುವ್ಯವಸ್ಥೆ ಹೀಗೆ ದೈನಂದಿನ ಬದುಕಿಗೆ ಸ್ಪಂದಿಸುವ ಹತ್ತಾರು ಅಂಶಗಳನ್ನು ಮನಗಂಡಿದ್ದೇನೆ. ಈ ಎಲ್ಲ ದೇಶಗಳು ಬೇರೆ ಬೇರೆ ದೃಷ್ಟಿಯಿಂದ ಪ್ರವಾಸದ ಅನುಭವವನ್ನು ನೀಡಿದರೆ ಪಶ್ಚಿಮ ಆಫ್ರಿಕಾದ 'ಘಾನಾ' ದೇಶದ ಪ್ರವಾಸ ನನ್ನ ಮನವನ್ನು ಅಪಾರ ಕಲಕಿತು.

ಅಕ್ಟೋಬರ್ 3 ರಿಂದ 6ರವರೆಗೆ ಪಶ್ಚಿಮ ಆಫ್ರಿಕಾದ ಗಿನಿಯಾ ಕೊಲ್ಲಿಯ ಕರಾವಳಿ ಪ್ರದೇಶದಲ್ಲಿನ ಘಾನಾ ರಾಜಧಾನಿ 'ಅಕ್ರಾ'ದಲ್ಲಿ ನಡೆದ 66ನೇ ಕಾಮನವೆಲ್ತ್ ಪಾರ್ಲಿಮೆಂಟ್ ಸಮ್ಮೇಳನದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಭಾಗವಹಿಸಿದ್ದೆ. ಈ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ 100ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದು ವಿಶೇಷ.

ಈ ಸಮ್ಮೇಳನದಲ್ಲಿ ನಾನು 'ಇಂಧನ ಕೊರತೆ ನೀಗಿಸುವಲ್ಲಿ ಪರಿಸರದ ಪಾತ್ರ' ಕುರಿತು ವಿಷಯ ಮಂಡಿಸಿದೆ. ಈ ಅಮೂಲ್ಯ ಸಂಗತಿಯ ಕುರಿತು ಸಮ್ಮೇಳನದಲ್ಲಿ ಸಾಕಷ್ಟು ಚರ್ಚೆಯಾಯಿತು.

ಸಮ್ಮೇಳನ ಹೊರತಾಗಿ ಆ ದೇಶದಲ್ಲಿ ಹೊಸ ಜಗತ್ತನ್ನು ನಾನು ಕಂಡೆ. ಆ ಬಗೆಗಿನ ಅನುಭವ, ಮನಕಲಕಿದ ವಾಸ್ತವಿಕ ಅಂಶಗಳ ಸನ್ನಿವೇಶಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲೇಬೇಕು ಎನಿಸುತ್ತದೆ.

ನಾನು ಮತ್ತು ಇತರ ಅಧ್ಯಕ್ಷರು ಸೇರಿ 'ಅಕ್ರಾ' ನಗರದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿಯ ಜನರ ಆರೋಗ್ಯ, ಶಿಕ್ಷಣ ಪದ್ಧತಿ, ನೈರ್ಮಲ್ಯದ ಬಗ್ಗೆ ಆ ಜನಗಳಿಗಿರುವ ಕಾಳಜಿ ಎಲ್ಲವನ್ನೂ ಅಧ್ಯಯನ ಮಾಡಿದೆವು. ಅಲ್ಲಿನ ಮಕ್ಕಳೊಂದಿಗೆ ಸ್ವಲ್ಪ ಹೊತ್ತು ಕಳೆದದ್ದು ಅತೀವ ಆನಂದವನ್ನು ನೀಡಿತು. ಅಲ್ಲಿನ ನೈಸರ್ಗಿಕ ಸಂಪತ್ತು, ಗಾಳಿ, ಪರಿಸರ ಇತ್ಯಾದಿಗಳ ಬಗ್ಗೆಯೂ ಹಲವಷ್ಟು ವಿಷಯಗಳನ್ನು ತಿಳಿದುಕೊಂಡೆವು.

ಬಿಡುವಿನ ವೇಳೆಯಲ್ಲಿ ಅಕ್ರಾ ನಗರ ಹಾಗೂ ಸುತ್ತಲಿನ ಪ್ರದೇಶಗಳಿಗೆ ಭೇಟಿ ನೀಡಿದಾಗ ಬಡ ರಾಷ್ಟ್ರಗಳ ಹೊಸ ಜಗತ್ತಿನ ದರ್ಶನವಾಯಿತು. ಅಲ್ಲಿನ ಜನ ಜೀವನದ ಬದುಕಿನ ಕೆಲ ಸನ್ನಿವೇಶಗಳು ನನ್ನ ಹೃದಯಕ್ಕೆ ನಾಟಿವೆ. ಕೇವಲ 2 ಕೋಟಿ 30 ಲಕ್ಷದಷ್ಟು ಜನಸಂಖ್ಯೆ ಹೊಂದಿರುವ ಪುಟಾಣಿ ದೇಶದ ಜನ ಬದುಕಿನ ಬಂಡಿ ಸಾಗಿಸಲು ಪಡುವ ಕಷ್ಟ, ಕಾಯಕ ನಿಷ್ಠೆ, ಸಾಕ್ಷರತೆಯ ಕೊರತೆ ಎದ್ದು ಕಂಡಿತು. ಮೂಲಸೌಕರ್ಯಗಳಿಲ್ಲದೇ ಜನ ಬದುಕುತ್ತಿರುವುದನ್ನು ಕಂಡಾಗ ಬೇಸರ ಮತ್ತು ಅಷ್ಟೇ ನೋವಾಯಿತು. ಮೂಲಸೌಕರ್ಯ ಪಡೆಯುವಲ್ಲಿ ಈ ದೇಶ ಇನ್ನೂ 100 ವರ್ಷ ಹಿಂದೆ ಉಳಿದಿದೆ ಎಂದೆನಿಸಿತು. ಬಹುದಿನಗಳ ಕಾಲ ನೆನಪಿಡುವಂತಹ ಈ ಪ್ರವಾಸ ನೋವು, ನಲಿವು, ಸಂತಸ, ನೆಮ್ಮದಿ ಹೀಗೆ ಹತ್ತಾರು ವಿಷಯಗಳ ಅರಿವನ್ನು ಮೂಡಿಸಿದ ಘಾನಾ ದೇಶದ ಜನರಿಗೆ ನನ್ನ ನಮಸ್ಕಾರಗಳು.




'ಘಾನಾ' ದೇಶದ 'ಅಕ್ರಾ'ದಲ್ಲಿ ನಡೆದ 66ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಸಮ್ಮೇಳನ-2023ರಲ್ಲಿ ಪಾಲ್ಗೊಂಡ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ವಿಧಾನ ಸಭಾಧ್ಯಕ್ಷ ಯು.ಟಿ ಖಾದರ್ ಅವರಿಗೆ ಭವ್ಯ ಸ್ವಾಗತ ಕೋರಿದ ನೋಟ.

### ಶೇ. 15 ರಷ್ಟು ಮಾತ್ರ ಶ್ರೀಮಂತರು!

ಘಾನಾದಲ್ಲಿ ಶೇ. 15ರಷ್ಟು ಶ್ರೀಮಂತರಿದ್ದರೆ ಶೇ. 10 ರಷ್ಟು ಮಧ್ಯಮ ವರ್ಗದವರಿದ್ದಾರೆ. ಇನ್ನುಳಿದವರೆಲ್ಲ ಬಡವರೇ! ಅಂತೆಯೇ ಈ ಬಡ ರಾಷ್ಟ್ರದ ಅಭಿವೃದ್ಧಿಗೆ ಕೈ ಜೋಡಿಸಿ ಎಂಬ ಅಧ್ಯಕ್ಷ ಅಕ್ರೋ ಡಾಕೋವಾ ಆಕಫೋ ಅವರ ಮನವಿ ಆ ದೇಶದ ಚಿತ್ರಣ ತೆರೆದಿಟ್ಟಂತಿತ್ತು.

### ಬಡತನದ ಹಿಂದೆ ಭಯಾನಕ ವ್ಯವಸ್ಥೆ

ಅಲ್ಲಿನ 75% ಹೆಣ್ಣು ಮಕ್ಕಳು ದಿನ ನಿತ್ಯ ಜೀವನಕ್ಕೆ ಸಣ್ಣ ಸಣ್ಣ ವ್ಯಾಪಾರ ಮಾಡುತ್ತಾರೆ. ಬಹಳ ಕಷ್ಟ ಜೀವಿಗಳು. ಮತ್ತು ಅಷ್ಟೇ ಪ್ರಾಮಾಣಿಕರು ನಾವು ತಿಳಿದುಕೊಂಡಂತೆ ಅವರ ನಂಬಿಗೆ ವಿಶ್ವಾಸಕ್ಕೆ ಪಾತ್ರರಾಗಿರುವದು ಬಡತನದ ಹಿಂದೆ ಭಯಾನಕವಾದ ಅವ್ಯವಸ್ಥೆ ಇದೆ. ಆರೋಗ್ಯ, ಶಿಕ್ಷಣ ಸೌಕರ್ಯ ಕೊರತೆ ಇದ್ದು, ಜನರ ಬವಣೆ ಕಂಡಾಗ ಮರುಕವೆನಿಸಿತು.

### ಅಚ್ಚುಕಟ್ಟಾದ ಸಮ್ಮೇಳನ, ಭೇಷ್...

ಸಮ್ಮೇಳನದ ಸವಿನೆನಪುಗಳನ್ನು ಮೆಲುಕು ಹಾಕುವುದಾದರೆ ಅತ್ಯಂತ ಪುಟ್ಟದೇಶವಾದರೂ ಸಮ್ಮೇಳನವನ್ನು ಅಚ್ಚುಕಟ್ಟಾಗಿ ಸಂಘಟಿಸಿತ್ತು. ಅಲ್ಲಿ ಯಾವುದಕ್ಕೂ ಕೊರತೆ ಎಂಬುದು ಇರಲಿಲ್ಲ. ಒಂದು ಸಮ್ಮೇಳನವನ್ನು ಅದರಲ್ಲೂ ಅಂತಾರಾಷ್ಟ್ರೀಯ ಸಭಾಧ್ಯಕ್ಷರ ಸಮ್ಮೇಳನವನ್ನು ಹೇಗೆ ನಡೆಸಬೇಕು ಎಂಬುದು ಇತರೆ ದೇಶಗಳಿಗೆ ಮಾದರಿಯಾಗುವಂತೆ ಈ ಸಮ್ಮೇಳನದ ಸಂಘಟನೆಯಾದದ್ದು ನಮಗೆಲ್ಲ ಅತ್ಯಂತ ಸಂತೋಷವೆನಿಸಿತು.